## ಕರ್ನಾಟಕ ಸರ್ಕಾರದ ನಡವಳಿಗಳು

10/6/15
C-1334

ವಿಷಯ:- ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಸರ್ಕಾರಿ ಮೆಟ್ರಿಕ್-ನಂತರದ ಮತ್ತು ಮೆಟ್ರಿಕ್-ಪೂರ್ವ ವಿದ್ಯಾರ್ಥಿನಿಲಯಗಳ ಹಾಗೂ ವಸತಿ ಶಾಲೆ/ವಸತಿ ಕಾಲೇಜುಗಳ ಮತ್ತು ಆಶ್ರಮಶಾಲೆಗಳ ವಿದ್ಯಾರ್ಥಿಗಳಿಗೆ ಮಾಸಿಕ ಭೋಜನಾ ವೆಚ್ಚದ ದರಗಳನ್ನು ಹೆಚ್ಚಿಸುವ ಬಗ್ಗೆ.

ಓದಲಾಗಿದೆ:
1. ದಿನಾಂಕ:13/03/2015ರಂದು ಮಂಡಿಸಿದ ಆಯವ್ಯಯ ಭಾಷಣದ ಕಂಡಿಕೆ ಸಂ.222.
2. ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರ ಪತ್ರ ಸಂಖ್ಯೆ: ಹಿಂವಕಇ/ವನಿಶಾ-2/ಸಿಆರ್-8/2015-16/2014 ದಿನಾಂಕ: 16/04/2015.

******

**ಪ್ರಸ್ತಾವನೆ:-**

2015-16ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ-222ರಲ್ಲಿ ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನಂತೆ ಘೋಷಿಸಿರುತ್ತಾರೆ.

"ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯಗಳ ಮಾಸಿಕ ಭೋಜನಾ ವೆಚ್ಚ ದರಗಳನ್ನು ಮೆಟ್ರಿಕ್-ಪೂರ್ವ ವಿದ್ಯಾರ್ಥಿನಿಲಯಗಳಿಗೆ ರೂ.1000/- ದಿಂದ ರೂ.1100/-ಕ್ಕೆ ಮೆಟ್ರಿಕ್-ನಂತರದ ವಿದ್ಯಾರ್ಥಿನಿಲಯಗಳಿಗೆ ರೂ.1100/- ದಿಂದ ರೂ.1200/-ಕ್ಕೆ ಹಾಗೂ ಆಶ್ರಮಶಾಲೆಗಳಿಗೆ ರೂ.800/- ರಿಂದ ರೂ.900/-ಕ್ಕೆ ಹೆಚ್ಚಿಸಲಾಗುವುದು."

ಮೇಲೆ(2)ರಲ್ಲಿ ಓದಲಾದ ಪತ್ರದಲ್ಲಿ ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ರವರು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಸರ್ಕಾರಿ ಮೆಟ್ರಿಕ್-ನಂತರದ ಮತ್ತು ಮೆಟ್ರಿಕ್-ಪೂರ್ವ ವಿದ್ಯಾರ್ಥಿನಿಲಯಗಳ ಹಾಗೂ ವಸತಿಶಾಲೆ/ವಸತಿಕಾಲೇಜುಗಳ ಮತ್ತು ಆಶ್ರಮಶಾಲೆಗಳ ವಿದ್ಯಾರ್ಥಿಗಳಿಗೆ ಮಾಸಿಕ ಭೋಜನಾ ವೆಚ್ಚದ ದರಗಳನ್ನು 2015-16ನೇ ಸಾಲಿನ ಜೂನ್ ಮಾಹೆಯಿಂದ ಅನ್ವಯವಾಗುವಂತೆ ಈ ಕೆಳಗಿನಂತೆ ಹೆಚ್ಚಿಸಿ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

(ರೂ.ಗಳಲ್ಲಿ)

| ಕ್ರ ಸಂ. | ವಿವರ | ಪ್ರತಿ ವಿದ್ಯಾರ್ಥಿಗೆ ಕಳೆದ ಸಾಲಿನಲ್ಲಿ ನೀಡಲಾಗುತ್ತಿದ್ದ ಮಾಸಿಕ ಭೋಜನಾ ವೆಚ್ಚ | ಪ್ರತಿ ವಿದ್ಯಾರ್ಥಿಗೆ ಪರಿಷ್ಕರಿಸಿ ಹೆಚ್ಚಿಸಬೇಕಾಗಿರುವ ಮಾಸಿಕ ಭೋಜನಾ ವೆಚ್ಚ |
|---|---|---|---|
| 1. | ಸರ್ಕಾರಿ ಮೆಟ್ರಿಕ್-ಪೂರ್ವ ವಿದ್ಯಾರ್ಥಿ ನಿಲಯಗಳ ವಿದ್ಯಾರ್ಥಿಗಳಿಗೆ | 1000/- | 1100/- |
| 2. | ಸರ್ಕಾರಿ ಮೆಟ್ರಿಕ್-ನಂತರದ ವಿದ್ಯಾರ್ಥಿ ನಿಲಯಗಳ ಹಾಗೂ ವಸತಿಶಾಲೆ/ವಸತಿ ಕಾಲೇಜುಗಳ ವಿದ್ಯಾರ್ಥಿಗಳಿಗೆ | 1100/- | 1200/- |
| 3. | ಸರ್ಕಾರಿ ಆಶ್ರಮಶಾಲೆಗಳು | 800/- | 900/- |

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ:ಹಿಂವಕ 461 ಬಿಎಂಎಸ್ 2015, ಬೆಂಗಳೂರು**

**ದಿನಾಂಕ:17-06-2015**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಸರ್ಕಾರಿ ಮೆಟ್ರಿಕ್-ನಂತರದ ಮತ್ತು ಮೆಟ್ರಿಕ್-ಪೂರ್ವ ವಿದ್ಯಾರ್ಥಿನಿಲಯಗಳ ಹಾಗೂ ವಸತಿಶಾಲೆ/ವಸತಿಕಾಲೇಜುಗಳ ಮತ್ತು ಆಶ್ರಮಶಾಲೆಗಳ ವಿದ್ಯಾರ್ಥಿಗಳಿಗೆ ಮಾಸಿಕ ಭೋಜನಾ ವೆಚ್ಚದ ದರಗಳನ್ನು 2015-16ನೇ ಸಾಲಿನ ಜೂನ್ ಮಾಹೆಯಿಂದ ಅನ್ವಯವಾಗುವಂತೆ ಈ ಕೆಳಗಿನಂತೆ ಹೆಚ್ಚಿಸಿ ಆದೇಶಿಸಲಾಗಿದೆ.

(ರೂ.ಗಳಲ್ಲಿ)

| ಕ್ರ. ಸಂ. | ವಿವರ | ಪ್ರತಿ ವಿದ್ಯಾರ್ಥಿಗೆ ಕಳೆದ ಸಾಲಿನಲ್ಲಿ ನೀಡಲಾಗುತ್ತಿದ್ದ ಮಾಸಿಕ ಭೋಜನಾ ವೆಚ್ಚ | ಪ್ರತಿ ವಿದ್ಯಾರ್ಥಿಗೆ ಪರಿಷ್ಕರಿಸಿ ಹೆಚ್ಚಿಸಬೇಕಾಗಿರುವ ಮಾಸಿಕ ಭೋಜನಾ ವೆಚ್ಚ |
|---|---|---|---|
| 1. | ಸರ್ಕಾರಿ ಮೆಟ್ರಿಕ್-ಪೂರ್ವ ವಿದ್ಯಾರ್ಥಿ ನಿಲಯಗಳ ವಿದ್ಯಾರ್ಥಿಗಳಿಗೆ | 1000/- | 1100/- |
| 2. | ಸರ್ಕಾರಿ ಮೆಟ್ರಿಕ್-ನಂತರದ ವಿದ್ಯಾರ್ಥಿ ನಿಲಯಗಳ ಹಾಗೂ ವಸತಿಶಾಲೆ/ವಸತಿ ಕಾಲೇಜುಗಳ ವಿದ್ಯಾರ್ಥಿಗಳಿಗೆ | 1100/- | 1200/- |
| 3. | ಸರ್ಕಾರಿ ಆಶ್ರಮಶಾಲೆಗಳು | 800/- | 900/- |

ಸದರಿ ವೆಚ್ಚವನ್ನು ಈ ಕೆಳಕಂಡ ಲೆಕ್ಕಶೀರ್ಷಿಕೆಗಳಡಿ 2015-16ನೇ ಸಾಲಿನಲ್ಲಿ ಒದಗಿಸಿರುವ ಅನುದಾನದಿಂದ ಭರಿಸತಕ್ಕದ್ದು.

1. ಜಿಲ್ಲಾವಲಯ ಯೋಜನೆ/ಯೋಜನೇತರ ಲೆಕ್ಕಶೀರ್ಷಿಕೆ
   2225-00-103-0-26 (ಮೆಟ್ರಿಕ್-ಪೂರ್ವ ಮತ್ತು ಮೆಟ್ರಿಕ್-ನಂತರದ ವಿದ್ಯಾರ್ಥಿಗಳಿಗೆ)
2. ರಾಜ್ಯವಲಯ ಯೋಜನೆ ಲೆಕ್ಕಶೀರ್ಷಿಕೆ
   2225-03-277-2-53 (ಮೆಟ್ರಿಕ್-ಪೂರ್ವ ಮತ್ತು ಮೆಟ್ರಿಕ್-ನಂತರದ ವಿದ್ಯಾರ್ಥಿಗಳಿಗೆ)
3. ಜಿಲ್ಲಾವಲಯ ಯೋಜನೇತರ ಲೆಕ್ಕಶೀರ್ಷಿಕೆ
   2225-00-103-0-41 (ಆಶ್ರಮಶಾಲೆಯ ವಿದ್ಯಾರ್ಥಿಗಳಿಗೆ)
4. ರಾಜ್ಯವಲಯ ಯೋಜನೆ ಲೆಕ್ಕಶೀರ್ಷಿಕೆ
   2225-03-277-2-62 (ಮೊರಾರ್ಜಿ ದೇಸಾಯಿ ವಸತಿಶಾಲೆಗಳ ಪ್ರಾರಂಭ ಮತ್ತು ನಿರ್ವಹಣೆ) ಮತ್ತು 2225-03-277-2-77 (ಶಿಕ್ಷಣ ಇಲಾಖೆಯಿಂದ ವರ್ಗಾವಣೆಗೊಂಡ ಮೊರಾರ್ಜಿ ದೇಸಾಯಿ ವಸತಿಶಾಲೆಗಳು)

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 442 ವೆಚ್ಚ-3/2015 ದಿನಾಂಕ: 10/06/2015ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹಾಗೂ ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 01 ಟಿಎಫ್‌ಪಿ 2013 ದಿನಾಂಕ:10-5-2013ರಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ,
ಮತ್ತು ಅವರ ಹೆಸರಿನಲ್ಲಿ

(ಆರ್. ಭಾಸ್ಕರ್)
ಸರ್ಕಾರದ ಅಧೀನ ಕಾರ್ಯದರ್ಶಿ-2,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.

ಇವರಿಗೆ,

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ-ಮುಂದಿನ ವಿಶೇಷ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸುವಂತೆ ಕೋರಿದೆ.